ತುಂಗಾ ಮೇಲ್ದಂಡೆ ನೀರಾವರಿ ಯೋಜನೆ

341-ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಾ ಮೇಲ್ದಂಡೆ ಯೋಜನೆ-ನೀರಾವರಿ ಯೋಜನೆಗೆ ಕೇಂದ್ರದ ಅನುಮತಿ ಪಡೆಯಲು ರಾಜ್ಯ ಸರ್ಕಾರ ಈವರೆಗೆ ಕೈಗೊಂಡಿರುವ ಕ್ರಮವೇನು?

ಆ) ಈ ಯೋಜನೆಯ ಅಂದಾಜು ವೆಚ್ಚವೆಷ್ಟು ಈವರೆಗೆ ಮಾಡಿರುವ ವೆಚ್ಚವೆಷ್ಟು, ಹಾಗೂ 1994-95ರಲ್ಲಿ ರಾಜ್ಯದ ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು.

ಇ) ಈ ಯೋಜನೆಯನ್ನು ಕಾರ್ಯಗತ ಮಾಡಲು ತುಂಗಾ ಅಣೆಕಟ್ಟನ್ನು ಭದ್ರಗೊಳಿಸುವ ಅವಶ್ಯವಿದ್ದು ಈ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು?

ಈ) ಈ ಯೋಜನೆಯ ಮುಖ್ಯ ಕಾಲುವೆಯ ಕೆಲಸವನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಉ) ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲು ಹಾಗೂ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿ) :

ಅ) ಮೂಲತಃ ಈ ಯೋಜನೆಯ 271.41 ಕೋಟಿ ರೂ.ಗಳ ಅಂದಾಜನ್ನು ಒಪ್ಪಿಗೆಗಾಗಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿತ್ತು. ಆಗಸ್ಟ್ 91ರಲ್ಲಿ ಕೇಂದ್ರ ಜಲ ಆಯೋಗವು ತಿಳಿಸಿದ್ದ ಹಲವು ವಿಚಾರಗಳ ಹಿನ್ನೆಲೆಯಲ್ಲಿ ಯೋಜನೆಯ 379.87 ಕೋಟಿ ರೂ.ಗಳ ಪರಿಷ್ಕೃತ ಅಂದಾಜನ್ನು ಫೆಬ್ರುವರಿ 1992ರಲ್ಲಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ. ಸದರಿ ಆಯೋಗವು ಆಗಸ್ಟ್ 91 ರಿಂದ ಡಿಸೆಂಬರ್ 92ರವರೆಗೆ ಹಲವಾರು ವಿಚಾರಗಳ ಬಗ್ಗೆ ಸಮಜಾಯಿಷಿ : ಮಾಹಿತಿ ಕೋರಿತ್ತು. ನೀರಿನ ಲಭ್ಯತೆ ಅಚ್ಚುಕಟ್ಟು ಅಭಿವೃದ್ಧಿ ತಳಪಾಯದ ಭದ್ರತೆ, ಯಾಂತ್ರಿಕ ಉಪಕರಣ ಮುಂತಾದ ವಿಷಯಗಳ ಬಗ್ಗೆ ಕೇಳಲಾದ ವಿವರಗಳಿಗೆ ಉತ್ತರವನ್ನು ನವೆಂಬರ್ 93ರಲ್ಲಿ ಕಳುಹಿಸಲಾಗಿದೆ. ಇತರ ಹಲವು ವಿಚಾರಗಳ ಬಗ್ಗೆ ಯೋಜನೆಯ ತಾಂತ್ರಿಕ ಅಧಿಕಾರಿಗಳು ಕೇಂದ್ರ ಜಲ ಆಯೋಗಕ್ಕೂ ಭೇಟಿ ನೀಡಿ ಸಮಜಾಯಿಷಿ ನೀಡಿದ್ದಾರೆ. ಕೃಷಿ ಇಲಾಖೆಗೆ ಸಂಬಂಧಪಟ್ಟ ವಿವರಗಳನ್ನು ಸದ್ಯದಲ್ಲೇ ಒದಗಿಸಲಾಗುವುದು.

ಆ) ಈ ಯೋಜನೆಯ ಅಂದಾಜು 379.87 ಕೋಟಿ ರೂ.ಗಳು ಮತ್ತು 1994ರ ಜುಲೈ ಅಂತ್ಯದವರೆಗೆ 2.74 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. 1994-95ನೇ ಸಾಲಿನಲ್ಲಿ ಈ ಯೋಜನೆಗೆ 4.00 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ.

ಇ) ತುಂಗಾ ಅಣೆಕಟ್ಟನ್ನು ಭದ್ರಗೊಳಿಸುವ ಬಗ್ಗೆ ಕೃಷ್ಣರಾಜಸಾಗರದಲ್ಲಿರುವ ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದ ವತಿಯಿಂದ ಮಾಡೆಲ್ ಅಧ್ಯಯನ ನಡೆಸಲಾಗುತ್ತಿದೆ, ಇದಲ್ಲದೆ ಈ ವಿಚಾರದಲ್ಲಿ ಕೇಂದ್ರ ಜಲ ಆಯೋಗದ ತಜ್ಞರಿಂದ ಸಹ ಸಲಹೆ ಪಡೆಯಲಾಗುತ್ತಿದೆ.

ಈ) ತುಂಗಾ ಮೇಲ್ದಂಡೆ ನಾಲೆಯ ಮೊದಲ 45 ಕಿ.ಮೀ. ವರೆಗಿನ ಸರ್ವೆ ಕೆಲಸ ಪೂರ್ಣಗೊಂಡಿದೆ. ಮೊದಲ 10ಕಿ.ಮೀ. ಭಾಗದ ಅಂದಾಜನ್ನು ತಯಾರಿಸಲಾಗಿದ್ದು, ಇದಕ್ಕೆ ಅವಶ್ಯವಾದ ಅರಣ್ಯ ಪ್ರದೇಶದ ಬಿಡುಗಡೆ ಆದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಉ) ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿ ತುರ್ತಾಗಿ ಪೂರ್ಣಗೊಳಿಸುವ ಸಲುವಾಗಿ ಒಂದು ಮುಖ್ಯ ಇಂಜಿನಿಯರ್ ಕಛೇರಿ, ಮೂರು ವಿಭಾಗ ಮಟ್ಟದ ಹಾಗೂ ಆರು ಉಪ ವಿಭಾಗ ಮಟ್ಟದ ಕಛೇರಿಗಳನ್ನು ಸೃಜಿಸಲಾಗಿದೆ. ಇದಲ್ಲದೆ

ಯೋಜನೆಯ ಮುಖ್ಯ ಕಾಲುವೆಗೆ ಅವಶ್ಯಕವಾದ ಅರಣ್ಯ ಪ್ರದೇಶವನ್ನು ಆ ಇಲಾಖೆಯಿಂದ ಪಡೆದು ಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಉಡಿಕೇರಿ ಗ್ರಾಮದಲ್ಲಿ ಸಮುದಾಯ ಭವನ

552 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಉಡಿಕೇರಿ ಗ್ರಾಮದಲ್ಲಿ ಪುನರ್ವಸತಿ ಫಂಡಿನಿಂದ ಸಮುದಾಯ ಭವನ ಕಟ್ಟಲು ಸರಕಾರಿ ಆದೇಶ ನೀಡಿರುವ ವಿಷಯ ನಿಜವೇ;

ಆ) ಸರಕಾರಿ ಆದೇಶದ ಪ್ರಕಾರ ಸಮುದಾಯ ಭವನ ಕಟ್ಟಲು ಸಹಾಯಕ ಕಾರ್ಯಕಾರಿ ಅಭಿಯಂತರು ಏತ ನೀರಾವರಿ ಉಪ-ವಿಭಾಗ ನಂ.೨ ಬೈಲಹೊಂಗಲ ಇವರು ಸರಕಾರದ ಮುಖ್ಯ ವಾಸ್ತುಶಿಲ್ಪಿಗಳು ಬೆಂಗಳೂರು ಇವರಿಂದ ನಕಾಶೆ ಮಾಡಿಸಿರುವ ವಿಷಯ ನಿಜವೇ;

ಇ) ಸರಕಾರಿ ಆದೇಶದ ಅನ್ವಯ ಈ ಕೆಲಸಕ್ಕೆ ಅಂದಾಜು ವೆಚ್ಚ ಪತ್ರಿಕೆ ತಯಾರಿಸಿದ ವಿಷಯ ನಿಜವೇ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಪುನರ್ವಸತಿ ಕೇಂದ್ರಗಳಲ್ಲಿ ಮಾತ್ರ ಸಮುದಾಯ ಭವನ ಮತ್ತು ಇನ್ನಿತರ ಅನುಮೋದಿತ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಅವಕಾಶ ಇದೆ. ಆದರೆ ಉಡಕೇರಿ ಗ್ರಾಮವು ಪುನರ್ವಸತಿ ಕೇಂದ್ರವಾಗಿರದ ಕಾರಣ ಅಲ್ಲಿ ಸಮುದಾಯ ಭವನದ ಕೆಲಸವನ್ನು ಕೈಗೊಂಡಿಲ್ಲ.

ಆ) ಹೌದು.

ಇ) (ಅ) ದಲ್ಲಿ ತಿಳಿಸಿರುವ ಕಾರಣ ಪ್ರಶ್ನೆ ಉದ್ಭವಿಸುವುದಿಲ್ಲ.

ಮಳೆಯಿಂದ ಹಾಳಾದ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯ ಕುರಿತು

546 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾರಿ ಮಳೆಯಿಂದ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳು ಹಾಳಾಗಿರುವುದು ನಿಜವೆ ಹಾಗಿದ್ದಲ್ಲಿ ಅವು ಯಾವುವು?

ಆ) ಹಾಗಿದ್ದಲ್ಲಿ ಈ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣವನ್ನು ಈತನಕ ಮಂಜೂರು ಮಾಡಿದೆ.

ಇ) ಹಾಗೂ ರಸ್ತೆ ದುರಸ್ತಿ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಈ ಸಾಲಿನ ಅತಿವೃಷ್ಟಿಯಿಂದ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ 322.64 ಕಿಮೀ. ಉದ್ದದ ರಸ್ತೆಗಳಿಗೆ, 33 ಅಡ್ಡ ಮೋರಿಗಳಿಗೆ ಹಾಗೂ ರಾಷ್ಟ್ರೀಯ ಹೆದ್ದಾರಿಯ ಕೆಲವು ಭಾಗಗಳಿಗೆ ಹಾನಿ ಉಂಟಾಗಿದೆ.

ಆ) ಲೋಕೋಪಯೋಗಿ ಇಲಾಖೆ ರಸ್ತೆಗಳ ತುರ್ತು ದುರಸ್ತಿಗಾಗಿ ಈ ತನಕ 12.00 ಲಕ್ಷ ರೂ.ಗಳು ಮಂಜೂರು ಆಗಿದೆ.

ಇ) ತುರ್ತು ದುರಸ್ತಿಗಳನ್ನು ಮಾಡಿದ್ದು, ಸಂಚಾರಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಲಾಗಿದೆ. ಶಾಶ್ವತ ದುರಸ್ತಿ ಕಾಮಗಾರಿಗಳನ್ನು ಅತಿವೃಷ್ಟಿ ಪರಿಹಾರ ನಿಧಿಯಿಂದ ಬೇಡಿಕೆ ಕೋರಿದ್ದು ಅನುದಾನ ದೊರೆತ ನಂತರ ಮಾಡಲಾಗುವುದು.